

ಅಣ್ಣ ರಮಿತನ ಸೈಕಲ್ ಬೆಲ್ ಕಿಣಿಕಿಣಿ ಕೇಳಿದಾಗಲೇ ಅವಳು ವಾಸ್ತವ ಲೋಕಕ್ಕೆ ಬಂದದ್ದು. ಹತ್ತಿರ ಬಂದ ರಮಿತ ‘ಹಲೋ, ನಾಗರ ಹಾವೇ! ನೆಲದಲ್ಲೇನು ಬಿಲ ಹುಡುಕುತ್ತಿದ್ದೀಯೇನೇ?’ ಎಂದ. ಅವಳು ಮಾತಿಗಾಗಿ ತಡವರಿಸಿದಳು. ರಮಿತ ‘ನೀನು ಇನ್ನೂ ಸ್ಕೂಲಿಗೆ ಹೋಗಿಲ್ವಾ? ಈವತ್ತು ಖೋಖೋ ಮ್ಯಾಚ್ ಇದ್ಯಂತ ಮಾಧವಿ ಆಗ್ಲೇ ಹೋದ್ಳು’ ಎಂದದ್ದೇ ಸುಮಿಯ ಎದೆ ಧಸಕ್ ಅಂತು. ಸ್ಕೂಲಿನಲ್ಲಿ ವಲಯ ಮಟ್ಟದ ಖೋಖೋ ಮ್ಯಾಚ್ ಇದ್ದದ್ದು ಅವಳಿಗೆ ಪೂರ್ತಿ ಮರೆತೇ ಹೋಗಿತ್ತು. ‘ಬಾ, ಸೈಕಲ್ ಮೇಲೆ ಬಿಡ್ತೇನೆ... ನಂಗೂ ಹೈಸ್ಕೂಲಿಗೆ ಹೋಗೋ ಟೈಮ್ ಆಯ್ತು’ ಎಂದ ರಮಿತ. ಸುಮಿಯು ಅವಸರದಲ್ಲಿ ಅವನ ಸೈಕಲ್ ಏರಿಬಿಟ್ಟಳು. ರಮಿತ ವೇಗವಾಗಿ ಸೈಕಲ್ ಚಲಾಯಿಸಿ ಹೀರೋಗಿರಿ ತೋರಿಸಿದ. ತಿರುವಿನಲ್ಲಿ ಸೈಕಲ್ ಬಳುಕಿಸುವಾಗ, ಎರಡೂ ಕೈಬಿಟ್ಟು ಸುಂಯ್ಯನೆ ಗಾಳಿಯಲ್ಲಿ ಸಾಗುವಾಗ ಸುಮಿಗೆ ಥ್ರಿಲ್ ಆದರೂ, ‘ಲೇ ಕೋತಿ, ಸರ್ಕಸ್ ಮಾಡಬೇಡ’ಎಂದು ಹುಸಿಕೋಪ ತೋರಿದಳು. ‘ಸರಿಸರಿ, ನೀ ಬುಸುಗುಡಬೇಡ, ನಾಗರ ಹಾವೇ’ ಎಂದನು. ಇಬ್ಬರದೂ ಸದಾ ಜಗಳಸ್ವರೂಪಿ ಸಂಬಂಧವೇ ಆದರೂ ರಮಿತ ಅಂದರೆ ಅವಳಿಗೆ ಅದೇನೋ ಅರಿವಿಲ್ಲದ ಆಕರ್ಷಣೆ ಕೂಡ ಇತ್ತು. ಅವನ ಚಿಗುರುತ್ತಿರುವ ಮೀಸೆ, ಹೊಳಪು ಕಣ್ಣುಗಳು, ಮೋಹಕ ನಗು ಅವಳಿಗಿಷ್ಟ. ಆದರೆ ತನ್ನ ಉದ್ದ ಕೂದಲಿಗೆ ನಾಗರಹಾವೇ ಎಂದು ಯಾಕೆ ಅವನು ಹೀಯಾಳಿಸುವುದು? ಅದಕ್ಕೇ ಹತ್ತನೇತ್ತೆಗೆ ಬಂದ ಮೇಲೆ ಅವನ ಧ್ವನಿಪೆಟ್ಟಿಗೆಯೊಳಗೆ ಕಪ್ಪೆ ಬಂದು ಕೂತದ್ದು! ಮಳ್ಳ!!

ಆದರೆ ಇಂದು ಇಷ್ಟು ಸನಿಹದಿಂದ ರಮಿತ ಅವಳ ಉಗ್ರಭಾವವನ್ನು ಮೆದುಗೊಳಿಸಿದ್ದ. ಅವಳ ಮನದಲ್ಲಿ ಸಕ್ಕರೆ ಕಾಗದದಲ್ಲಿ ಅಚ್ಚಾದ ಕಥೆ ಮತ್ತೆ